ಏ) ಸಾರ್ವಜನಿಕ ಉದ್ಯಮಿಗಳ ಅಧಿಕಾರಿಗಳನ್ನು ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿಷೇಧಿಸಿರುವುದು ನಿಜವೇ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):

ಅ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿಯಲ್ಲಿ ಈ ಕೆಳಕಂಡ ಕಾರಣಗಳಿಂದ 12-4-90ರಿಂದ 23-4-90ರವರೆಗೆ ಬೀಗಮುದ್ರೆಯನ್ನು ಘೋಷಿಸಲಾಯಿತು : 1) 12-4-90 ರಿಂದ ಕಾರ್ಮಿಕರ ಕಾನೂನು ಬಾಹಿರ ಮತ್ತು ಮಿಂಚಿನ ಟೂಲ್‌ಡೌನ್ ಮುಷ್ಕರ ಮಾಡಿದರು.

2) ಯೂನಿಯನ್‌ಗಳ ಒಳಜಗಳ ಮತ್ತು ಮಿಲ್ಲಿನ ಆವರಣದಲ್ಲಿ ಅಶಿಸ್ತು.

3) ನೌಕರರ ಚಿತಾವಣೆ, ಅಶಿಸ್ತು, ಹಿಂಸೆಯ ಬೆದರಿಕೆ ಹಾಗೂ ಮಿಷನರಿ ಮತ್ತು ಇತರೆ ಪದಾರ್ಥಗಳಿಗೆ ಹಾನಿ ಉಂಟು ಮಾಡುವ ಸಂಭವ.

ಆ) ಬೀಗ ಮುದ್ರೆಯ ನಿರ್ಣಯವನ್ನು ದಿ. 12-4-90 ರಂದು ಆಡಳಿತ ವರ್ಗ ತೆಗೆದುಕೊಂಡಿತು.

ಇ) ಬೀಗ ಮುದ್ರೆಯು ಕಾನೂನು ಬದ್ಧವಾಗಿದೆ ಆದ್ದರಿಂದ ಇತರೆ ವಿಷಯಗಳು ಉದ್ಭವಿಸುವುದಿಲ್ಲ.

ಈ) ಬೀಗಮುದ್ರೆಯ ಅವಧಿಗೆ ನೌಕರರಿಗೆ ಕಷ್ಟ ಕಾಲದ ಭತ್ಯೆಯನ್ನು ಅಂದರೆ ಸಂಬಳದ ಶೇಕಡ 80 ರಷ್ಟು (ವೇತನ ಮತ್ತು ತುಟ್ಟಿ ಭತ್ಯೆ) ನೀಡಲಾಯಿತು.

ಉ) ರೂ.231 ಲಕ್ಷ.

ಊ) ಹೌದು.

ಋ) ಇಲ್ಲ.

ಋೂ) ಹೌದು. ನೌಕರರು ಈ ವಿಷಯಕ್ಕಾಗಿಯೇ ಮುಷ್ಕರ ಹೂಡಿರಲಿಲ್ಲ.

ಏ) ಇಲ್ಲ.

ಎನ್.ಜಿ.ಇ.ಎಫ್. ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ

3724 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಜಿ.ಇ.ಎಫ್ ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸ್‌ನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.